

## ಕಲ್ಪವೃಕ್ಷವು ಕವಿಯಾದಾಗ...

ಪರಿಚಿತರ ಮನೆಯಂಗಳದ ಕಲ್ಲುಹಾಸಿನ ಕೊನೆಯಲ್ಲಿದ್ದ ಕಡಪಾವೊಂದರ ಮೇಲೆಲ್ಲಾ ಸಣ್ಣ ಸಣ್ಣ ಗಾತ್ರದ ಕುಳಿಗಳುಂಟಾಗಿರುವುದನ್ನು ಕಂಡು ಅಚ್ಚರಿಯಾಯಿತು. ಕಪ್ಪು ಕಲ್ಲಿನ ಮೇಲಿನ ಈ ಸಣ್ಣ ಕುಳಿಗಳು ಚಿರತೆಯ ಮೇಲಿನ ಚುಕ್ಕೆಗಳಂತೆ ಕಾಣುತ್ತಿದ್ದವು. ಈ ಕುಳಿಗಳು ಕಲ್ಲನ್ನು ಟೊಳ್ಳಾಗಿಸಿ ಆ ಭಾಗದಲ್ಲಿ ಕಲ್ಲು ಒಡೆಯುವಂತೆ ಮಾಡುವ ಸಂಭವವಿರುವುದರಿಂದ ಇಂತಹ ನಿರುಪಯುಕ್ತ ಕಲ್ಲನ್ನೇಕೆ ತಂದಿರಿ? ಎಂದು ಪ್ರಶ್ನಿಸಿದೆ. ಮಾಲೀಕರು ತಲೆಎತ್ತಿ ದಿಗಂತದೆಡೆಗೆ ಕೈತೋರಿದರು. ಅವರ ತೋರುಬೆರಳು ಕಡಪಾಕಲ್ಲಿನ ಪಕ್ಕದಲ್ಲಿ ನಿಂತಿದ್ದ ತೆಂಗಿನಮರದ ತುದಿಯನ್ನು ತೋರಿಸುತ್ತಿತ್ತು. ಮುಗಿಲಿಗೆ ಮುಖ ಮಾಡಿರುವ ತೆಂಗಿನ ಮರಕ್ಕೂ ನೆಲದ ಮೇಲೆ ಮಲಗಿರುವ ಕಡಪಾಕಲ್ಲಿಗೂ ಎತ್ತಣದಿಂತೆತ್ತ ಸಂಬಂಧವಯ್ಯ? ಕಲ್ಲೇನು ಮರದಿಂದುರಿತೇ? ಎಂದು ತಲೆಕೆರೆದುಕೊಳ್ಳುತ್ತಿರುವಾಗಲೇ ಅದರ ಮಾಲೀಕರು 'ಮಳಿ ಬಂದಾಗ ಮಳಿನೀರೆಲ್ಲಾ ತೆಂಗಿನ ಮರದಾಗ ತುಂಬಿ ಒಂದೊಂದಾ ಹನಿ ತಟಾ ತಟಾ ಅಂತಾ ಬಿದ್ದು ಹಿಂಗಾಗೇತಿ' ಎಂದರು. ಮಳೆಹನಿಗಳ ಶಕ್ತಿಯನ್ನು ಕಂಡು ನಿಜಕ್ಕೂ ಅಚ್ಚರಿಯಾಯಿತು.

ವರ್ಷದ ಕೆಲವು ತಿಂಗಳುಗಳಲ್ಲಷ್ಟೇ ಸುರಿಯುವ ಮಳೆನೀರು ತೆಂಗಿನಮರದಲ್ಲಿ ಸಂಗ್ರಹಗೊಂಡು ಕಲ್ಲಿನ ಮೇಲೆ ಹನಿಹನಿಯಾಗಿ ಒಂದೇ ಸಮನೆ ಸುರಿದು ಸುಂದರ ಚಿತ್ತಾರವನ್ನು ಮೂಡಿಸಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ವರ್ಷದಿಂದ ವರ್ಷಕ್ಕೆ ಮರದ ಎತ್ತರ ಸಾಧಾರಣವಾಗಿ ಹೆಚ್ಚಾಗಿರುತ್ತದೆ. ಜೊತೆಗೆ ಹನಿಗಳುದುರುವಾಗ ಬೀಸುವ ಗಾಳಿಯು ಅವುಗಳೊಂದಿಗೆ ಚೆಲ್ಲಾಟವಾಡಿ ಗುರಿ ತಪ್ಪುತ್ತವೆ. ಇದರೊಟ್ಟಿಗೆ ಪ್ರತಿ ವರ್ಷವೂ ಒಂದೇ ಪ್ರಮಾಣದಲ್ಲಿ ಮಳೆಸುರಿಯುವುದಿಲ್ಲ. ಇಷ್ಟೆಲ್ಲಾ ಅನಿಶ್ಚಿತತೆಗಳ ನಡುವೆಯೂ ಆಗಸದಿಂದುದುರವ ಮಳೆಹನಿಗಳನ್ನು ಶಾಹಿಯಾಗಿ ಬಳಸಿಕೊಂಡು ಕಲ್ಲಿನೆದೆಯ ಮೇಲೆ ಕಾವ್ಯ ಗೀಚಿ ಕವಿಯಾಗುವಾಸೆ ಕಲ್ಪವೃಕ್ಷಕ್ಕೇಕೆ ಬಂತೋ ಎಂದು ಯೋಚಿಸುವ ಬದಲು ಅದನ್ನು ಅದಿರುವಂತೆ ಸವಿಯುವುದೇ ಲೇಸು.

–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

## ಹಳೆಯ ಕಾಲದ ಪ್ರಸಾಧನ ಪೆಟ್ಟಿಗೆ

ಹಳೆಯ ಕಾಲದ ವಸ್ತುಗಳನ್ನು ಕಂಡಾಗ ಅದೇನಿರಬಹುದು ಎಂಬ ಕುತೂಹಲ ಮೂಡುವುದು ಸಹಜ. ಪರಿಚಯಸ್ಥರ ಮನೆಯಲ್ಲಿ ಒಂದು ತೀರಾ ಹಳೆಯದಾದ ಪೆಟ್ಟಿಗೆ ನೋಡಿ, ಅದೇನೆಂದು ಕೇಳಿದೆ. ಅದಕ್ಕವರು ಹಳೆಯ ಕಾಲದ ಮೇಕಪ್ ಬಾಕ್ಸ್ ಅಂದರು. ಹಾಗೆಯೇ ಅವರು ಅದನ್ನು ತೆರೆದಾಗ ಅದರ ಮುಚ್ಚಳದ ಒಳಭಾಗದಲ್ಲಿದ್ದ ಮುಖ ನೋಡುವ ಕನ್ನಡಿ ಹೊರಮುಖವಾಗಿ ಚಾಚಿ ಮುಚ್ಚಳದ ಅರ್ಧ ಸ್ಟ್ಯಾಂಡಿನ ಆಧಾರದಲ್ಲಿ ನಿಂತುಕೊಂಡಿತು. ಆಗ ಕನ್ನಡಿಯಲ್ಲಿ ನಮ್ಮನ್ನು ನಾವು ಸರಿಯಾಗಿ ನೋಡುವಂತಾಯಿತು. ಪೆಟ್ಟಿಗೆಯ ಒಳಗೆ ಸುಮಾರು ಖಾಲಿ ಜಾಗ ಇತ್ತು. ಅದರಲ್ಲಿ ಹಿಂದಿನವರು ಬಾಚಣಿಗೆ, ತುರುಬಿಗೆ ಚುಚ್ಚುವ ಮುಳ್ಳು, ಬಳೆಗಳು, ಪೌಡರ್ ಡಬ್ಬ, ಕುಂಕುಮ, ಕಾಡಿಗೆ ಇತ್ಯಾದಿ ಪ್ರಸಾಧನದ ಸಾಮಗ್ರಿಗಳನ್ನು ಇಡುತ್ತಿದ್ದರಂತೆ. ಅದಕ್ಕೆ ಬೀಗ ಹಾಕುವ ವ್ಯವಸ್ಥೆಯೂ ಇದ್ದು, ಬೇಕಾದಲ್ಲಿ ಎತ್ತಿಕೊಂಡು ಹೋಗಲು ಒಂದು ಹಿಡಿ ಕೂಡ ಇತ್ತು. ಹಳೆಯ ಕಾಲದ ಸಾಮಾನುಗಳನ್ನು ಪ್ರೀತಿಯಿಂದ ಕೊಂಡು ಶೇಖರಿಸುತ್ತಿರುವ, ಬೆಂಗಳೂರಿನ ಕೋರಮಂಗಲದಲ್ಲಿ ವಾಸಿಸುವ ಭವಾನಿ ಅವರ ಮನೆಯಲ್ಲಿ ಈ ಮೇಕಪ್ ಬಾಕ್ಸ್ ಕಣ್ಣಿಗೆ ಬಿತ್ತು.

–ಶಾಲಿನಿ ನಾಯಕ್, ಬೆಂಗಳೂರು





